**1ನೆ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ**

**<u>ಕ್ರಿಮಿನಲ್ ಪ್ರಕರಣ ಸಂಖ್ಯೆಃ 513/ 2024</u>**

**ಪಿರ್ಯಾದುದಾರರುಃ ಕುಂದಾಪುರ ಸಂಚಾರಿ ಪೋಲೀಸ್ ಠಾಣೆ**

**ವಿರುದ್ಧ**

**ಆರೋಪಿತರುಗಳುಃ**
**ಅಬುಬ್ಬಕ್ಕರ್,**
**54 ವರ್ಷಗಳು,**
**ತಂದೆಃ ಅನಾಸ್ ಕಾಂಪೌಂಡ್,**
**ವಾಸಃ ಅಂಗನವಾಡಿ ಶಾಲೆಯ ಹತ್ತಿರ,**
**ಕದಂಬರ ಗ್ರಾಮ, ಕಾಸರಗೋಡು,**
**ಕೇರಳ.**

**ಕಲಂ-313 ದಂಡ ಪ್ರಕ್ರಿಯಾ ಸಂಹಿತೆ ಅಡಿ ಆರೋಪಿತರ ಹೇಳಿಕೆ**

**<u>ಪ್ರಶ್ನೆ:1</u>**- ಈ ಪ್ರಕರಣದಲ್ಲಿ ನುಡಿದಿರುವ ಸಾಕ್ಷಿಗಳ ಹೇಳಿಕೆಗಳನ್ನು ಕೇಳಿ ತಿಳಿದುಕೊಂಡಿರುತ್ತೀರಾ ?
ಆರೋಪಿಯ ಉತ್ತರಃ

**<u>ಪ್ರಶ್ನೆ:2</u>- ಪ್ರಾಸಾ-01 ಶ್ರೀ ಪದ್ಮನಾಭ** ರವರು ತಮ್ಮ ಸಾಕ್ಷ್ಯದಲ್ಲಿ ದಿಃ 22.02.2024 ರಂದು ಸಂಜೆ 7.50 ರ ಸಮಯದಲ್ಲಿ ನಾನು ಹಂಗಳೂರಿನ ಕೆನರಾ ಟಯರ್ ನ ಬಳಿ ಚಾಸಾ-2 ರವರೊಂದಿಗೆ ಮಾತನಾಡುತ್ತಿದ್ದಾಗ ಗೂಡ್ಸ್ ಗಾಡಿ ಬಂದು ಅನಂತ ಆಚಾರ್ಯ ರವರಿಗೆ ಡಿಕ್ಕಿ ಪಡಿಸಿರುತ್ತದೆ. ಆತ ಊಟವನ್ನು ತೆಗೆದುಕೊಂಡು ಪಶ್ಚಿಮ ಬದಿಯನ್ನು ದಾಟಿ ಪೂರ್ವದ ಬದಿಗೆ ದಾಟಲು ಮುಂದಾದಾಗ ಏಕಾಏಕಿ ಗೂಡ್ಸ್ ವಾಹನ ರಸ್ತೆಯ ತೀರ ಬಲಭಾಗಕ್ಕೆ ಅತೀ ವೇಗವಾಗಿ ಬಂದು ಅವರಿಗೆ ಡಿಕ್ಕಿಪಡಿಸಿರುತ್ತದೆ. ಅದರಿಂದ ಅವರಿಗೆ ತೀವ್ರ ಸ್ವರೂಪದ ಗಾಯವಾಗಿ ಕಾಲು ಕತ್ತರಿಸಿ ಹೋಗಿದ್ದು, ರಕ್ತ ಸ್ರಾವವಾಗುತ್ತಿತ್ತು ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?
ಆರೋಪಿಯ ಉತ್ತರಃ

**<u>ಪ್ರಶ್ನೆ:3</u>- ಪ್ರಾಸಾ-01 ಶ್ರೀ ಪದ್ಮನಾಭ** ರವರು ಮುಂದುವರೆದು ನಾನು ಮತ್ತು ಚಾ.ಸಾ.2 ರವರು ಆತನನ್ನು ಉಪಚರಿಸಿ ಅಂಬುಲೆನ್ಸ್ ನಲ್ಲಿ ಕಳುಹಿಸಿದ್ದು, ಕುಂದಾಪುರದಿಂದ ಮಣಿಪಾಲಕ್ಕೆ ಕರೆದುಕೊಂಡು ಹೋಗುವಂತೆ ಸೂಚಿಸಿರುತ್ತಾರೆ. ಅಲ್ಲಿ ಆತ ಮರಣ ಹೊಂದಿರುತ್ತಾನೆ ಎಂದು ತಿಳಿಸಿರುತ್ತಾರೆ. ಸದ್ರಿ ಗೂಡ್ಸ್ ವಾಹನದ ನಂಬ್ರ ಕೆಎ-14-ಎಡಿ-2601 ಆಗಿರುತ್ತದೆ. ಆರೋಪಿ ವಾಹನದಿಂದ ಇಳಿದಾಗ ಆತನನ್ನು ನೋಡಿರುತ್ತೇನೆ. ಆತನ ಹೆಸರು ಅಬುಬಕ್ಕರ್ ಎಂದು ತಿಳಿದು ಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?
ಆರೋಪಿಯ ಉತ್ತರಃ

**ಪ್ರಶ್ನೆ:4- ಪ್ರಾಸಾ-01 ಶ್ರೀ ಪದ್ಮನಾಭ** ರವರು ಮುಂದುವರೆದು ಮರುದಿನ ಪೋಲಿಸರು ಪಂಚನಾಮೆ ಜರುಗಿಸಲು ಸ್ಥಳಕ್ಕೆ ಬಂದಿದ್ದು, ನಾನು ತೋರಿಸಿದ ಜಾಗದಲ್ಲಿ ಬೆಳಗ್ಗೆ 9.00 ರಿಂದ 10.00 ಗಂಟೆಯವರೆಗೆ ಚಾ.ಸಾ.3 ಮತ್ತು 4 ರವರ ಸಮಕ್ಷಮ ಪಂಚನಾಮೆ ಜರುಗಿಸಿ ನಕ್ಷೆ ತಯಾರಿಸಿ ಪೋಟೋ ತೆಗೆದಿರುತ್ತಾರೆ. ಅದೇ ದಿನ ಮಧ್ಯಾಹ್ನ 12-30ರ ಸಮಯದಲ್ಲಿ ವಾಹನವನ್ನು ಠಾಣೆಯಲ್ಲಿ ವಶಕ್ಕೆ ಪಡೆಯುವ ವೇಳೆಗೆ ಚಾಸಾ-5 ಮತ್ತು 6ರವರ ಸಮಕ್ಷಮ ಮಧ್ಯಾಹ್ನ 1.00 ಗಂಟೆಯವರೆಗೂ ಕ್ರಮ ಜರುಗಿಸಿ ವಾಹನವನ್ನು ವಶಕ್ಕೆ ಪಡೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**ಪ್ರಶ್ನೆ:5- ಪ್ರಾಸಾ-02 ಶ್ರೀ ನವೀನ್ ಆಚಾರಿ** ರವರು ತಮ್ಮ ಸಾಕ್ಷ್ಯದಲ್ಲಿ ದಿಃ 22.02.2024 ರಂದು ಸಂಜೆ 7.50 ರ ಸಮಯದಲ್ಲಿ ನಾನು ಹಂಗಳೂರಿನ ಕೆನರಾ ಟಯರ್ ನ ಬಳಿ ಚಾಸಾ-1 ರವರೊಂದಿಗೆ ಮಾತನಾಡುತ್ತಿದ್ದಾಗ ಗೂಡ್ಸ್ ಗಾಡಿ ಬಂದು ಅನಂತ ಆಚಾರ್ಯ ರವರಿಗೆ ಡಿಕ್ಕಿ ಪಡಿಸಿರುತ್ತದೆ. ಆತ ಶಬರಿ ಹೋಟೆಲ್ ನಿಂದ ಊಟವನ್ನು ತೆಗೆದುಕೊಂಡು ಪಶ್ಚಿಮ ಬದಿಯನ್ನು ದಾಟಿ ಪೂರ್ವದ ಬದಿಗೆ ದಾಟಲು ಮುಂದಾದಾಗ ಏಕಾಏಕಿ ಗೂಡ್ಸ್ ವಾಹನ ರಸ್ತೆಯ ತೀರ ಬಲಭಾಗಕ್ಕೆ ಅತೀ ವೇಗವಾಗಿ ಬಂದು ಅವರಿಗೆ ಡಿಕ್ಕಿಪಡಿಸಿರುತ್ತದೆ. ಅದರಿಂದ ಅವರಿಗೆ ತೀವ್ರ ಸ್ವರೂಪದ ಗಾಯವಾಗಿರುತ್ತದೆ. ಇದರಿಂದ ಆತ ಕಾಲು ಕತ್ತರಿಸಿ ಹೋಗಿದ್ದು, ರಕ್ತ ಸ್ರಾವವಾಗುತ್ತಿತ್ತು. ನಾನು ಮತ್ತು ಚಾ.ಸಾ.1 ರವರು ಆತನನ್ನು ಉಪಚರಿಸಿ ಅಂಬುಲೆನ್ಸ್ ನಲ್ಲಿ ಕಳುಹಿಸಿದ್ದು, ಕುಂದಾಪುರದಿಂದ ಮಣಿಪಾಲಕ್ಕೆ ಕರೆದುಕೊಂಡು ಹೋಗುವಂತೆ ಸೂಚಿಸಿರುತ್ತಾರೆ. ಅಲ್ಲಿ ಆತ ಮರಣ ಹೊಂದಿರುತ್ತಾನೆ ಎಂದು ತಿಳಿಸಿರುತ್ತಾರೆ. ಸದ್ರಿ ಗೂಡ್ಸ್ ವಾಹನದ ನಂಬ್ರ ಕೆಎ-14-ಎಡಿ-2601 ಆಗಿರುತ್ತದೆ. ಆರೋಪಿ ವಾಹನದಿಂದ ಇಳಿದಾಗ ಆತನನ್ನು ನೋಡಿರುತ್ತೇನೆ. ಆತನ ಹೆಸರು ಅಬುಬಕ್ಕರ್ ಎಂದು ತಿಳಿದು ಬಂದಿರುತ್ತದೆ. ಈ ವಿಚಾರವಾಗಿ ನಾನು ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**ಪ್ರಶ್ನೆ:6- ಪ್ರಾಸಾ- 03 ಶ್ರೀ ಜಗದೀಶ** ರವರು ತಮ್ಮ ಸಾಕ್ಷ್ಯದಲ್ಲಿ ದಿಃ 23.02.2024 ರಂದು ಹಂಗಳೂರಿನ ವಿನಾಯಕ ಟಾಕೀಸು ಎದುರುಗಡೆ ಶಬರಿ ಹೋಟೇಲ್ ನ ಹತ್ತಿರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದಾಗ ನಾನು ಮತ್ತು ಚಾ.ಸಾ.4 ರವರು ಹಾಜರು ಇದ್ದು ಚಾಸಾ-3 ರವರು ತೋರಿಸಿದ ಸ್ಥಳದಲ್ಲಿ ಬೆಳಗ್ಗೆ 9.00 ರಿಂದ 10.00 ಗಂಟೆಯವರೆಗೂ ಪಂಚನಾಮೆ ಜರುಗಿಸಿ ನಕ್ಷೆ ತಯಾರಿಸಿ

ಫೋಟೋ ತೆಗೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**ಪ್ರಶ್ನೆ:7- ಪ್ರಾಸಾ- 04 ಶ್ರೀ ವಿಜೇತ** ರವರು ತಮ್ಮ ಸಾಕ್ಷ್ಯದಲ್ಲಿ ದಿಃ 23.02.2024 ರಂದು ಹಂಗಳೂರಿನ ವಿನಾಯಕ ಟಾಕೀಸು ಎದುರುಗಡೆ ಶಬರಿ ಹೊಟೇಲ್ ನ ಹತ್ತಿರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದಾಗ ನಾನು ಮತ್ತು ಚಾ.ಸಾ.3 ರವರು ಹಾಜರು ಇದ್ದು ಚಾಸಾ-3 ರವರು ತೋರಿಸಿದ ಸ್ಥಳದಲ್ಲಿ ಬೆಳಗ್ಗೆ 9.00 ರಿಂದ 10.00 ಗಂಟೆಯವರೆಗೂ ಪಂಚನಾಮೆ ಜರುಗಿಸಿ ನಕ್ಷೆ ತಯಾರಿಸಿ ಫೋಟೋ ತೆಗೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**ಪ್ರಶ್ನೆ:8- ಪ್ರಾಸಾ- 05 ಶ್ರೀ ರಾಘವೇಂದ್ರ** ರವರು ತಮ್ಮ ಸಾಕ್ಷ್ಯದಲ್ಲಿ ದಿಃ 23-02-2024 ರಂದು ಮಧ್ಯಾಹ್ನ 12.00 ರಿಂದ 1.00 ಗಂಟೆ ಸಮಯದಲ್ಲಿ ಪೊಲೀಸರು ಠಾಣಾ ಆವರಣದಲ್ಲಿ ಪಂಚನಾಮೆ ಜರುಗಿಸಿದಾಗ ಆವರಣದಲ್ಲಿ ಇದ್ದ ಒಂದು ಗೂಡ್ಸ್ ಗಾಡಿಯನ್ನು ವಶಕ್ಕೆ ಪಡೆದಿರುತ್ತಾರೆ. ಗಾಡಿಯನ್ನು ಚಾ.ಸಾ.1 ರವರು ಗುರುತಿಸಿರುತ್ತಾರೆ. ಆಗ ಪೊಲೀಸರು ಜರುಗಿಸಿದ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಆಗ ನನ್ನೊಂದಿಗೆ ಇನ್ನೊಬ್ಬರು ಇದ್ದರು ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**ಪ್ರಶ್ನೆ:9- ಪ್ರಾಸಾ- 06 ಶ್ರೀ ಶ್ರೀನಿವಾಸ ಆಚಾರ್ಯ** ರವರು ತಮ್ಮ ಸಾಕ್ಷ್ಯದಲ್ಲಿ ದಿಃ 23-02-2024 ರಂದು ಮಧ್ಯಾಹ್ನ 12.00 ರಿಂದ 1.00 ಗಂಟೆ ಸಮಯದಲ್ಲಿ ಪೊಲೀಸರು ಠಾಣಾ ಆವರಣದಲ್ಲಿ ಪಂಚನಾಮೆ ಜರುಗಿಸಿದಾಗ ಆವರಣದಲ್ಲಿ ಇದ್ದ ಒಂದು ಗೂಡ್ಸ್ ಗಾಡಿ ನಂಬ್ರ ಕೆಎಲ್ 14 ಎಡಿ 2601 ನ್ನು ವಶಕ್ಕೆ ಪಡೆದಿರುತ್ತಾರೆ. ಗಾಡಿಯನ್ನು ಚಾ.ಸಾ.1 ರವರು ಗುರುತಿಸಿರುತ್ತಾರೆ. ಆಗ ಪೊಲೀಸರು ಜರುಗಿಸಿದ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಆಗ ನನ್ನೊಂದಿಗೆ ಇನ್ನೊಬ್ಬರು ಇದ್ದರು. ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**ಪ್ರಶ್ನೆ:10- ಪ್ರಾಸಾ- 07 ಶ್ರೀ ಯು ನಂದ ಕುಮಾರ್** ರವರು ತಮ್ಮ ಸಾಕ್ಷ್ಯದಲ್ಲಿ ದಿಃ 23-02-2024 ರಂದು ಪ್ರಕರಣದ ತನಿಖೆಯನ್ನು ಚಾ.ಸಾ.17 ರವರಿಂದ ಪಡೆದುಕೊಂಡಿರುತ್ತೇನೆ. ಪ್ರಕರಣದಲ್ಲಿ ಮೃತರಾದ ಅಂತಯ್ಯ ಆಚಾರ್ಯ ರವರ ಶವಪಂಚನಾಮೆಯನ್ನು ಜರುಗಿಸುವಂತೆ ಚಾ.ಸಾ.16 ಮತ್ತು 18 ರವರನ್ನು ಮಣಿಪಾಲದ ಆಸ್ಪತ್ರೆಗೆ ನೇಮಿಸಿ ಕಳುಹಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿದ್ದು,

ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**<u>ಪ್ರಶ್ನೆ:11</u>- ಪ್ರಾಸಾ- 07 ಶ್ರೀ ಯು ನಂದ ಕುಮಾರ್** ರವರು ಮುಂದುವರೆದು ನಂತರ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪಂಚರಾದ ಚಾ.ಸಾ.3 ಮತ್ತು 4 ರವರ ಸಮಕ್ಷಮ ಪಂಚನಾಮೆಯನ್ನು ಚಾ.ಸಾ.1ರವರು ತೋರಿಸಿದ ಸ್ಥಳದಲ್ಲಿ ಬೆಳಿಗ್ಗೆ 9.00 ರಿಂದ 10.00 ಗಂಟೆಯವರೆಗೂ ಜರುಗಿಸಿ ನಕ್ಷೆ ತಯಾರಿಸಿ ಪೋಟೋ ತೆಗೆದಿರುತ್ತೇನೆ. ನಂತರ ಠಾಣೆಗೆ ಬಂದು ಠಾಣಾ ಆವರಣದಲ್ಲಿ ಇದ್ದ ಕೆಎಲ್-14-ಎಡಿ-2601 ಟೆಂಪೋ ವಾಹನದ ಪಂಚನಾಮೆಯನ್ನು ಚಾ.ಸಾ.5 ಮತ್ತು 6 ರವರ ಸಮಯದಲ್ಲಿ ಜರುಗಿಸಿ ವಶಕ್ಕೆ ಪಡೆದಿರುತ್ತೇನೆ. ಕ್ರಮವನ್ನು 12-30 ರಿಂದ 1-30 ರವರೆಗೂ ಜರುಗಿಸಿರುತ್ತೇನೆ. ನಂತರ ಸಾಕ್ಷಿದಾರರಾದ ಚಾಸಾ-2 ರವರನ್ನು ವಿಚಾರಿಸಿ ಹೇಳಿಕೆ ದಾಖಲಿಸಿರುತ್ತೇನೆ. ಆರ್ ಟಿ ಓ ರವರಿಗೆ ವಾಹನದ ನಿರೀಕ್ಷಣೆ ಮಾಡಿ ವರದಿ ಸಲ್ಲಿಸುವಂತೆ ಕೋರಿಕೆ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**<u>ಪ್ರಶ್ನೆ:12</u>- ಪ್ರಾಸಾ- 07 ಶ್ರೀ ಯು ನಂದ ಕುಮಾರ್** ರವರು ಮುಂದುವರೆದು ದಿಃ 28.02.2024 ರಂದು ಆರೋಪಿ ಠಾಣೆಗೆ ಬಂದು ಶರಣರಾಗಿದ್ದು, ಆತನ ಮೇಲೆ ದಸ್ತಗಿರಿ ಕ್ರಮ ಜರುಗಿಸಿರುತ್ತೇನೆ. ನಂತರ ಚಾ.ಸಾ.13 ರವರ ಜಾಮೀನಿನ ಮೇರೆಗೆ ಬಿಡುಗಡೆ ಮಾಡಿರುತ್ತೇನೆ. ನಂತರ ಆರ್ ಸಿ ಮಾಲೀಕರಾದ ಆರೋಪಿಗೆ ಐಎಂವಿ ಕಲಂ 133ರ ನೊಟೀಸು ಹೊರಡಿಸಿ ಉತ್ತರ ಪಡೆದಿರುತ್ತೇನೆ. ನಂತರ ವಾಹನವನ್ನು ಇಂಡಿಮಿನಿಟಿ ಬಾಂಡ್ ಮೂಲಕ ಬಿಡುಗಡೆ ಮಾಡಿರುತ್ತೇನೆ. ದಿಃ 15.03.2024 ರಂದು ಐಎಂವಿ ವರದಿ ಮತ್ತು ಪಿಎಂ ವರದಿಯನ್ನು ಚಾ.ಸಾ.14 ಮತ್ತು 15 ರವರಿಂದ ಸ್ವೀಕರಿಸಿ ತನಿಖೆಯನ್ನು ಪೂರೈಸಿ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**<u>ಪ್ರಶ್ನೆ:13</u>- ಪ್ರಾಸಾ- 08 ಶ್ರೀ ಸುಬ್ಬಣ್ಣ** ರವರು ತಮ್ಮ ಸಾಕ್ಷ್ಯದಲ್ಲಿ ದಿಃ 22-02-2024 ರಂದು ನಾನು ಠಾಣೆಯಲ್ಲಿ ಇರುವಾಗ ರಾತ್ರಿ 23-15 ಗಂಟೆಗೆ ಹಂಗಳೂರು ಗ್ರಾಮದ ವಾಸಿ ಚಾ.ಸಾ.1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿಕೊಂಡು ಠಾಣಾ ಅಪರಾಧ ಸಂಖ್ಯೆ 27/2024ರಂತೆ ಕಲಂ 279, 304ಎ ಐಪಿಸಿ ರಂತೆ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿರುತ್ತೇನೆ ಹಾಗೂ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಪಿ.ಸಿ 345 ಪ್ರಶಾಂತ ಪೂಜಾರಿಯವರ ಮೂಲಕ ಕಳುಹಿಸಿಕೊಟ್ಟಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ

ಪ್ರಕರಣದ ಕಡತವನ್ನು ಚಾ.ಸಾ.19 ರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**<u>ಪ್ರಶ್ನೆಃ14</u>-** ನೀವು ಹೇಳುವುದು ಏನಾದರೂ ಇದೆಯೇ ?

ಆರೋಪಿಯ ಉತ್ತರಃ

**<u>ಪ್ರಶ್ನೆಃ15</u>-** ನಿಮ್ಮ ಪರವಾಗಿ ಸಾಕ್ಷಿದಾರರ ವಿಚಾರಣೆ ಮಾಡಿಸುತ್ತೀರಾ ?

ಆರೋಪಿಯ ಉತ್ತರಃ

( ಈ ಮೇಲ್ಕಂಡ ಆರೋಪಿತರ ಹೇಳಿಕೆಗಳನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ನನ್ನ ಸಮಕ್ಷಮ ದಿನಾಂಕಃ 16.06.2026 ರಂದು ಸಹಿ ಮಾಡಿರುತ್ತಾರೆ. )

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.

ಆರೋಪಿ ಸಹಿ.